ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue-5, March- April 2025, Pp. 25-35
©*IIMRD*, Mysuru

IIMRD JOURNALS
www.iimrd.com

# ಆಯ್ದಕ್ಕಿ ಲಕ್ಕಮ್ಮ ಮತ್ತು ಆಯ್ದಕ್ಕಿ ಮಾರಯ್ಯರ ವಚನಗಳಲ್ಲಿ ಆರ್ಥಿಕ ನೀತಿ

**ಪ್ರಕಾಶ ಎಸ್**
ಸಂಶೋಧನಾ ವಿದ್ಯಾರ್ಥಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

**ಸಾರಾಂಶ: (Abstract)**

*ಹನ್ನೆರಡನೆಯ ಶತಮಾನದ ವಚನ ಸಾಹಿತ್ಯ ವಿಶ್ವಸಾಹಿತ್ಯದಲ್ಲಿಯೇ ವಿಶಿಷ್ಟವಾದುದೂ ಬಹು ಮಹತ್ವವಾದುದಾಗಿದೆ. ಮಧ್ಯಕಾಲೀನ ಕನ್ನಡ ಸಾಹಿತ್ಯ ಬಹುಮುಖಿ ನೆಲೆಯಲ್ಲಿ ವಿಸ್ತರಿಸಿಕೊಂಡಿರುವ ಜನಮುಖಿ ಸಾಹಿತ್ಯ. ಶರಣರು ನೀಡಿದ ಕಾಯಕ, ಭಕ್ತಿ, ದಾಸೋಹ, ಸಮಾನತೆ ಮುಂತಾದ ತತ್ವಗಳಂತೆಯೇ ಅವುಗಳ ಹಿನ್ನೆಲೆಯಲ್ಲಿ ಪ್ರಮುಖವಾಗಿ ಶರಣರು ಜಗತ್ತಿಗೆ ನೀಡಿದ ಮಹತ್ವವಾದ ಮೌಲಿಕವಾದ ಪರಿಕಲ್ಪನೆಯೇ 'ಆರ್ಥಿಕ ನೀತಿ' ಪ್ರಸ್ತುತ ಇಪ್ಪತ್ತನೆಯ ಶತಮಾನದಿಂದೀಚೆಗೆ ಜಾಗತೀಕರಣದ ಪ್ರಭಾವದಿಂದ ರೂಪುಗೊಳ್ಳುತ್ತಿರುವ ಆರ್ಥಿಕ ನೀತಿಯ ಬಗೆಗೆ ತರ್ಕಿಸುತ್ತಿದ್ದೇವೆ. ಆದರೆ ವಚನಕಾರರು ಒಂಬತ್ತು ಶತಮಾನಗಳ ಹಿಂದೆಯೇ ಸರ್ವಸಮಾನತೆಯ, ಸರ್ವೋದಯದ ಆಶಯವುಳ್ಳ ಆರ್ಥಿಕ ನೀತಿಗಳನ್ನು ರೂಪಿಸಿಕೊಂಡಿದ್ದರು. ತಾವು ಪರಿಪಾಲಿಸಿದ ಆರ್ಥಿಕ ನಿಯಮದ ಕಟ್ಟಳೆಗಳನ್ನು ತಮ್ಮ ಅನುಭಾವದ ವಚನಗಳ ಮೂಲಕ ತಿಳಿಸಿಕೊಟ್ಟಿದ್ದಾರೆ. ಈ ನಿಟ್ಟಿನಲ್ಲಿ ಆಯ್ದಕ್ಕಿ ಲಕ್ಕಮ್ಮ ಮತ್ತು ಆಯ್ದಕ್ಕಿ ಮಾರಯ್ಯ ದಂಪತಿಗಳ ಆರ್ಥಿಕ ನೀತಿಗಳು ಅತ್ಯಂತ ಪ್ರಮುಖವಾದವುಗಳಾಗಿವೆ.*

**ಮುಖ್ಯಪದಗಳು (Keywords):** ಹನ್ನೆರಡನೆ ಶತಮಾನ, ವಚನ ಸಾಹಿತ್ಯ, ಆಯ್ದಕ್ಕಿ ಲಕ್ಕಮ್ಮ, ಆಯ್ದಕ್ಕಿ ಮಾರಯ್ಯ, ಆರ್ಥಿಕ ನೀತಿ.

## ಪೀಠಿಕೆ

ವಚನಕಾರರ ಆರ್ಥಿಕ ನೀತಿಯು ರೂಪುಗೊಂಡಂತಹದ್ದು ಕಾಯಕ ಸಿದ್ಧಾಂತದ ತಳಹದಿಯ ಮೇಲೆ. ಭಕ್ತಿ ಮತ್ತು ದಾಸೋಹ ತತ್ವಗಳ ಸಮಾನತೆಯ ಆಧಾರದ ಮೇಲೆ ವಚನಕಾರರ ಆರ್ಥಿಕ ನೀತಿಯು ಪ್ರಸ್ತುತ ಇಪ್ಪತ್ತೊಂದನೆಯ ಶತಮಾನದಲ್ಲಿಯೂ ಸಹ ಜೀವಂತಿಕೆಯ ಗಟ್ಟಿನೆಲೆಯಾಗಿ ನಿಂತಿದೆ. ವಚನಕಾರರು ಸಾಮಾಜಿಕ ಚಿಂತಕರಾದಂತೆಯೇ ಆರ್ಥಿಕ ಚಿಂತಕರೂ ಆಗಿದ್ದಾರೆ. ವಚನಕಾರರು ಆರ್ಥಿಕ ನೀತಿಯ ಮುಂದಾಳತ್ವವನ್ನು ವಹಿಸಿ ಆರ್ಥಿಕ ನೀತಿಗಳನ್ನು ಸ್ವತಃ ಪರಿಪಾಲಿಸಿದರು. ಈ ನಿಟ್ಟಿನಲ್ಲಿ ಆಯ್ದಕ್ಕಿ ಲಕ್ಕಮ್ಮ ಮತ್ತು ಆಯ್ದಕ್ಕಿ ಮಾರಯ್ಯ ದಂಪತಿಗಳ ಆರ್ಥಿಕ ನೀತಿಗಳು ಅತ್ಯಂತ ಪ್ರಮುಖವಾದವುಗಳಾಗಿವೆ.

*Please cite this article as:* ಪ್ರಕಾಶ, ಎಸ್. (2025). ಆಯ್ದಕ್ಕಿ ಲಕ್ಕಮ್ಮ ಮತ್ತು ಆಯ್ದಕ್ಕಿ ಮಾರಯ್ಯರ ವಚನಗಳಲ್ಲಿ ಆರ್ಥಿಕ ನೀತಿ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(5). ಪು.ಸಂ.* 25–35

**ಆಯ್ದಕ್ಕಿ ಲಕ್ಕಮ್ಮ ಮತು ಆಯ್ದಕ್ಕಿ ಮಾರಯ್ಯರ ಜೀವನ**

ಆಯ್ದಕ್ಕಿ ಲಕ್ಕಮ್ಮ ಮತ್ತು ಮಾರಯ್ಯ ದಂಪತಿಗಳು ಹನ್ನೆರಡನೆಯ ಶತಮಾನದ ಪ್ರಮುಖ ವಚನಕಾರರು ಈ ಶರಣ ದಂಪತಿಗಳು ಈಗಿನ ರಾಯಚೂರು ಜಿಲ್ಲೆಯ ಲಿಂಗಸೂರು ತಾಲೂಕಿನ ಅಮರೇಶ್ವರ ಗ್ರಾಮದವರು. ಮಾರಯ್ಯ ಮತ್ತು ಲಕ್ಕಮ್ಮ ತುಂಬು ಬಡತನದ ಕುಟುಂಬದಿಂದ ವಚನ ಚಳವಳಿಗೆ ಬಂದವರು. ಈ ದಂಪತಿಗಳು ತಮ್ಮ ಜೀವನದುದ್ದಕ್ಕೂ ನಿಷ್ಠೆ, ಸ್ವಾಭಿಮಾನ, ಸತ್ಯಶುದ್ಧ ಕಾಯಕ ಚಿಂತನೆ, ದಾಸೋಹ ತತ್ವಗಳನ್ನು ಅನುಸರಿಸಿ ಬಾಳಿದರು. ಈ ದಂಪತಿಗಳಿಗೆ ಬಡತನದ ಅನುಭವದ ಆಗರವೇ ಇವರ ಆರ್ಥಿಕಚಿಂತನೆಯ ಸೂಕ್ಷ್ಮ ಚಿಂತನೆ ಮತ್ತು ಗಾಂಭೀರ್ಯದ ಬದುಕಿನಡೆಗೆ ಕೊಂಡೊಯ್ಯಿತು. ಹನ್ನೆರಡನೆಯ ಶತಮಾನದ ವಚನ ಸಾಹಿತ್ಯದ ತತ್ವಾದರ್ಶಗಳಿಗೆ ಮತ್ತು ಶರಣರ ವ್ಯಕ್ತಿತ್ವಕ್ಕೆ ಮಾರುಹೋಗಿ ಅಮರೇಶ್ವರ ಗ್ರಾಮದಿಂದ ಕಲ್ಯಾಣ ಪಟ್ಟಣಕ್ಕೆ ಬಂದು ನೆಲೆಸಿದರು, ಈ ದಂಪತಿಗಳು ಶರಣರ ಮನೆಯಂಗಳಗಳದಲ್ಲಿ ಬಿದ್ದ ಅಕ್ಕಿಯನ್ನು ಆಯ್ದುಕೊಂಡು ಬಂದು ಸತ್ಯಶುದ್ಧ ಕಾಯಕವನ್ನು ನಿರ್ವಹಿಸಿ ದಾಸೋಹವನ್ನು ಮಾಡುತ್ತಿದ್ದರು. ಒಮ್ಮೆ ಮಾರಯ್ಯನು ಬಸವಣ್ಣನವರ ಮಹಾಮನೆಯ ಅಂಗಳದಲ್ಲಿ ಚೆಲ್ಲಿದ ಅಕ್ಕಿಯನ್ನು ಹೆಚ್ಚಾಗಿ ಆಯ್ದು ಮೂಟೆಕಟ್ಟಿ ತಂದಾಗ ಲಕ್ಕಮ್ಮ ಪತಿಯನ್ನು ಪ್ರಶ್ನಿಸಿ ಇದು ಸತ್ಯಶುದ್ಧ ಕಾಯಕವಾಗುವುದಿಲ್ಲ. **'ಈಸಕ್ಕಿಯಾಸೆ ನಿಮಗೇಕೆ?'** ಎಂದು ಮರಳಿ ಅಲ್ಲಿಯೇ ಸುರಿದು ಬರಲು ಕಳಿಸುತ್ತಾಳೆ. ಮಾರಯ್ಯನೂ ಕೂಡ ಪತ್ನಿಯ ಮಾತನ್ನು ಮೀರದೆ ಹೆಚ್ಚು ತಂದ ಅಕ್ಕಿಯನ್ನು ಮೊದಲಿದ್ದ ಸ್ಥಳದಲ್ಲಿಯೆ ಸುರಿದು ಬರುತ್ತಾನೆ. ಇವರು ಮಾಡಿದ ದಾಸೋಹವನ್ನು ಕಂಡು ಶರಣರು ಇವರನ್ನು ಪ್ರಶಂಸಿಸುತ್ತಾರೆ. ಹೀಗೆ ಕಾಯಕ ನಿಷ್ಠೆಯ ಶರಣರಾಗಿ ಈ ದಂಪತಿಗಳು ಬದುಕಿದುದು ಅತ್ಯಂತ ಪ್ರಮುಖವಾದುದಾಗಿದೆ. ಅಸಂಗ್ರಹ ಪ್ರವೃತ್ತಿಯನ್ನು ಬೆಳೆಸಿಕೊಂಡ ಲಕ್ಕಮ್ಮ ಮಾರಯ್ಯನನ್ನು ಎಚ್ಚರಿಸಿ ಸರಿದಾರಿಗೆ ತಂದು ಮುನ್ನಡೆಸಿದ ಮಹಾಶರಣೆ ಆಯ್ದಕ್ಕಿ ಲಕ್ಕಮ್ಮ.

ಆಯ್ದಕ್ಕಿ ಮಾರಯ್ಯ **'ಅಮರೇಶ್ವರಲಿಂಗ'** ಎಂಬ ವಚನಾಂಕಿತದಲ್ಲಿ ಮೂವತ್ತೆರಡು ವಚನಗಳು ಲಭ್ಯವಾಗಿವೆ. ಅಂತೆಯೇ **'ಮಾರಯ್ಯ ಪ್ರಿಯ ಅಮರೇಶ್ವರಲಿಂಗ'** ಎಂಬ ವಚನಾಂಕಿತದಲ್ಲಿ ಲಕ್ಕಮ್ಮನ ಇಪ್ಪತ್ತೈದು ವಚನಗಳು ದೊರೆತಿವೆ. ಆಯ್ದಕ್ಕಿ ಲಕ್ಕಮ್ಮ ಮತ್ತು ಮಾರಯ್ಯರ ವಚನಗಳಲ್ಲಿ ಕಾಯಕನಿಷ್ಠೆ, ದಾಸೋಹ ಮನೋಭಾವಗಳಂತೆಯೇ ಆರ್ಥಿಕ ನೀತಿಯನ್ನು ಕುರಿತು ಸೂಕ್ಷ್ಮ ಅಧ್ಯಯನಕ್ಕೆ ಒಳಪಡಿಸಿದಾಗ ಹಲವು ವಚನಗಳು ಕಂಡುಬರುತ್ತವೆ. ಹೀಗೆ ಬಡತನದ ಹಿನ್ನೆಲೆಯಿಂದ ಬಂದ ದಂಪತಿಗಳು ಆರ್ಥಿಕ ನೀತಿಯ ಕುರಿತು ಹನ್ನೆರಡನೆಯ ಶತಮಾನದಲ್ಲಿ ಮಾತನಾಡಿರುವುದು ಸಮಾಜದ ಸಾಮಾಜಿಕ, ಆರ್ಥಿಕ ಸ್ವಾಸ್ಥ್ಯಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಆಯ್ದಕ್ಕಿ ಲಕ್ಕಮ್ಮ ಮತ್ತು ಮಾರಯ್ಯರ ವಚನಗಳಲ್ಲಿನ ಆರ್ಥಿಕ ನೀತಿಯನ್ನು ಕುರಿತು ಈ ಮುಂದಿನಂತೆ ವಿವೇಚಿಸಬಹುದಾಗಿದೆ.

1. ಬಡತನದಿಂದ ರೂಪುಗೊಂಡ ಆರ್ಥಿಕ ನೀತಿ
2. ಕಾಯಕದಿಂದ ರೂಪುಗೊಂಡ ಆರ್ಥಿಕ ನೀತಿ
3. ದಾಸೋಹ ಮೂಲದ ಆರ್ಥಿಕ ನೀತಿ
4. ಅಗತ್ಯಕ್ಕೆ ಬೇಕಾದಷ್ಟನ್ನು ಸಂಪಾದಿಸುವ ಆರ್ಥಿಕ ನೀತಿ

1. **ಬಡತನದಿಂದ ರೂಪುಗೊಂಡ ಆರ್ಥಿಕ ನೀತಿ**

ವಚನಕಾರರೆಲ್ಲರ ಆರ್ಥಿಕ ನೀತಿಯು ರೂಪುಗೊಂಡಂತಹದ್ದು ಬಡತನದ ಮೂಲದಿಂದ, ಕಾಯಕ ಸಿದ್ಧಾಂತದ ತಳಹದಿಯ ನೆಲೆಯಿಂದ, ಇಂತಹ ಬಡತನದಿಂದ ರೂಪುಗೊಂಡಂತಹ ಆರ್ಥಿಕ ನೀತಿ ವಚನಕಾರರದು. ಈ ಹಿನ್ನೆಲೆಯಲ್ಲಿ ಆಯ್ದಕ್ಕಿ ಮಾರಯ್ಯನ ವಚನವನ್ನು ನಿದರ್ಶನಕ್ಕೆ ಗಮನಿಸಬಹುದು.

***"ಕಟ್ಟಿಗೆ ಕಸ ನೀರು ತಂದು,***
***ಸತ್ಯರ ಮನೆಯಲ್ಲಿ ಒಕ್ಕುದನೀಸಿಕೊಂಡು,***
***ತನ್ನ ಕೃತ್ಯ ತಪ್ಪದೆ ಒಕ್ಕುದ ಕೊಂಡು,***
***ಸತ್ಯನಾಗಿಪ್ಪ ಭಕ್ತನಂಗವೆ ಅದು ಅಮರೇಶ್ವರಲಿಂಗದ ಸಂಗ."*** [1]

ಶರಣ ಮಾರಯ್ಯ ಬಡತನದಿಂದ ರೂಪುಗೊಂಡ ಆರ್ಥಿಕ ನೀತಿ ಮತ್ತು ಸತ್ಯ ಶುದ್ಧವಾದ ಕಾಯಕಗಳೆರಡನ್ನೂ ಸಹ ತಮ್ಮ ವಚನದ ಮೂಲಕ ತಿಳಿಸಿಕೊಟ್ಟಿದ್ದಾರೆ. ಆಯ್ದಕ್ಕಿ ಮಾರಯ್ಯ ತುಂಬು ಬಡತನದ ಕುಟುಂಬದಿಂದ ಬಂದ ವಚನಕಾರ. ಈ ಹಿನ್ನೆಲೆಯಲ್ಲಿ ಮಾರಯ್ಯ ಎಂತಹ ಕಾಯಕವನ್ನು ಕೊಟ್ಟರೂ ಆ ಕಾಯಕವನ್ನು ಅತ್ಯಂತ ಶ್ರದ್ಧೆ, ನಿಷ್ಠೆ, ಶ್ರಮವಹಿಸಿ ನಿರ್ವಹಿಸುತ್ತಾರೆ. ಆ ಕೃತ್ಯ ಕಾಯಕದಿಂದ ಬಂದ ಅರ್ಥ(ಪ್ರತಿಫಲ)ವನ್ನಷ್ಟೇ ತೆಗೆದುಕೊಂಡು ಸತ್ಯ ಶುದ್ಧತೆಗೆ ಮಹತ್ವವನ್ನು ಕೊಟ್ಟವರು ಮಾರಯ್ಯನವರು. ಆ ನಿಟ್ಟಿನಲ್ಲಿ ಮನೆಯ ತೊತ್ತಿನ ಕಾಯಕವನ್ನು ಸಹ ನಿರ್ವಹಿಸಿದ ಪರಿ ಈ ವಚನದಲ್ಲಿ ಅತ್ಯಂತ ಪ್ರಮುಖವಾಗಿ ಒಡಮೂಡಿದೆ. ಮನೆಯ ಕೆಲಸಗಳಾದ ಕಟ್ಟಿಗೆ ತರುವ, ಕಸ ಹೊಡೆಯುವ, ನೀರು ತರುವ ಕಾಯಕವನ್ನು ನಿರ್ವಹಿಸಿದ್ದಾರೆ. ಅಂತೆಯೇ ಆ ಕಾಯಕಕ್ಕೆ ಯೋಗ್ಯವಾದದ್ದಷ್ಟನ್ನೇ ಪಡೆದುಕೊಳ್ಳುತ್ತಾರೆ. ಕಾಯಕಕ್ಕೂ ಹೆಚ್ಚಿನದಾದ ಹಣವನ್ನು ಪಡೆದುಕೊಳ್ಳದ ನಿಷ್ಠೆ ಮಾರಯ್ಯನದು. ತನ್ನ ಕಾಯಕವನ್ನು ತಪ್ಪಿಸದೆ ಆ ಕಾಯಕದಿಂದ ಬಂದದ್ದನ್ನು ಮಾತ್ರ ತೆಗೆದುಕೊಂಡು ಸತ್ಯವಂತನಾಗಿರುವ ಭಕ್ತನ ಅಂಗವೆ ಅದು ಅಮರೇಶ್ವರಲಿಂಗದ ಸಂಗವೆಂಬ ಪರಿ ಮಾರಯ್ಯನ ಈ ವಚನದಲ್ಲಿ ವ್ಯಕ್ತವಾಗಿದೆ. ಹೀಗೆ ಬಡತನದಿಂದ ರೂಪಿಸಿಕೊಂಡ ತಮ್ಮ ಆರ್ಥಿಕ ನೀತಿಯನ್ನು ಮಾರಯ್ಯನ ಈ ವಚನದಲ್ಲಿ ಗಮನಿಸಬಹುದಾಗಿದೆ. ಅಂತೆಯೇ ಬಡತನದ ತಾಕಲಾಟಗಳಲ್ಲಿಯೇ ಬದುಕನ್ನು ನಡೆಸಿದ ಶರಣೆ ಲಕ್ಕಮ್ಮ ಬಡತನದ ಕುರಿತು ವಿಶಿಷ್ಟ ಚಿಂತನೆಯನ್ನು ನಡೆಸಿದ ಬಗೆ ಆಕೆಯ ವಚನಗಳಲ್ಲಿ ಅಭಿವ್ಯಕ್ತಗೊಂಡಿದೆ. ಈ ಕುರಿತು ನಿದರ್ಶನಕ್ಕೆ ಆಯ್ದಕ್ಕಿ ಲಕ್ಕಮ್ಮನ ವಚನವನ್ನು ನಿದರ್ಶನಕ್ಕೆ ಗಮನಿಸಬಹುದು.

***"ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೆ?***
***ಬೆಟ್ಟಬಲ್ಲಿತ್ತೆಂದಡೆ. ಉಳಿಯ ಮೊನೆಯಲ್ಲಿ***
***ಬಡತನವಿದ್ದಡೆ ಒಡೆಯದೆ?***
***ಘನ ಶಿವಭಕ್ತರಿಗೆ ಬಡತನವಿಲ್ಲ.***
***ಸತ್ಯರಿಗೆ ದುಷ್ಕರ್ಮವಿಲ್ಲ.***

---

[1] ರವೀಂದ್ರನಾಥ, ಕೆ. (ಸಂ.) (2021). *ಸಮಗ್ರ ವಚನ ಸಂಪುಟ – 6.* (ನಾಲ್ಕನೇ ಆವೃತ್ತಿ). ಕನ್ನಡ ಪುಸ್ತಕ ಪ್ರಾಧಿಕಾರ. ವ.ಸಂ–1164, ಪುಟ. 436.

***ಎನಗೆ ಮಾರಯ್ಯಪ್ರಿಯ***
***ಅಮರೇಶ್ವರಲಿಂಗವುಳ್ಳನ್ನಕ್ಕ***
***ಆರ ಹಂಗಿಲ್ಲ ಮಾರಯ್ಯಾ."[2]***

ಬಡತನವೆಂಬುದು ಲಕ್ಕಮ್ಮನ ದೃಷ್ಟಿಯಲ್ಲಿ ಕೇವಲ ಸುಖ ಭೋಗಗಳಿಂದ ವಿಮುಕ್ತವಾದುದಲ್ಲ ಬದಲಿಗೆ ಅದು ಮನಸ್ಸಿಗೂ ಅನ್ವಯಿಸುತ್ತದೆ. 'ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೆ?' ಎಂದು ಪ್ರಶ್ನಿಸುವ ಲಕ್ಕಮ್ಮನ ಈ ವಚನದಲ್ಲಿ ಬಡತನದ ವಿಶೇಷ ಚಿತ್ರಣವನ್ನು ಗಮನಿಸಬಹುದಾಗಿದೆ. ಬಡತನವೆಂಬುದು ಕೇವಲ ಬಾಹ್ಯ ಜೀವನಕ್ಕೆ ಸಂಬಂಧಿಸಿದ್ದು ಮಾತ್ರವಲ್ಲ ಅದು ಆಂತರಂಗಿಕವಾದ ಮನಸ್ಸಿಗೂ ಅನ್ವಯಿಸುತ್ತದೆ. ಬೆಟ್ಟ ಮತ್ತು ಉಳಿಯ ಪ್ರತಿಮೆ ಪ್ರಮುಖವಾದುದು, ಬೆಟ್ಟ ನೋಡಲು ಬಹುದೊಡ್ಡದು ಪ್ರಕೃತಿ ಸಂಪತ್ತಿನ ಆಗರ ಆದರೆ ಅದನ್ನು ಕುಟ್ಟಿ ಪುಡಿಮಾಡುವ ಶಕ್ತಿ ಸಣ್ಣ ಆಯುಧ ಉಳಿಯ ಮೊನೆಗೆ ಇದೆ. ಉಳಿಯ ಮೊನೆಯ ಹರಿತಕ್ಕೆ ಬಡತನವಿಲ್ಲ, ಅದು ಹರಿತವಿದ್ದಷ್ಟು ಬೆಟ್ಟವನ್ನು ಒಡೆಯಲು ಸುಲಭ, ಆದ್ದರಿಂದ ದೊಡ್ಡದು, ಸಣ್ಣದು ಎಂಬ ಭೇದ – ತಾರತಮ್ಯ ಲೋಕದಲ್ಲಿ ಸಲ್ಲದು. ಬಡತನ ಸಿರಿತನಗಳು ಪರಿಗಣನೆಗೆ ಅರ್ಹವಲ್ಲ, ಶಿವಭಕ್ತರಿಗೆ ಮಾನಸಿಕ ಬಡತನವಿಲ್ಲ. ಶಿವಶರಣರು ಬಡವರಾದರು ಶಿವಭಕ್ತಿ ತುಂಬಿದ ಶ್ರೀಮಂತಿಕೆ ಅವರಲ್ಲಿ ಸತ್ವಭರಿತವಾಗಿದೆ. ಅದು ಉಳಿಯ ಮೊನೆಯ ಹರಿತಕ್ಕೆ ಸಮನಾದುದು ಎಂಬ ಪ್ರತಿಮೆ ಅರ್ಥಪೂರ್ಣವಾಗಿದೆ. ಸತ್ಯವಂತರಿಗೆ ಯಾವುದೇ ದುಷ್ಕೃತ್ಯಗಳು ಎದುರಾಗುವುದಿಲ್ಲ ಎನ್ನುವ ಲಕ್ಕಮ್ಮ ಶಿವಶರಣರಿಗೆ ಯಾರ ಹಂಗುಗಳಿಲ್ಲವೆಂದು ಸಾರುತ್ತಾಳೆ. 'ಘನ ಶಿವಭಕ್ತರಿಗೆ ಬಡತನವಿಲ್ಲ' ಎನ್ನುವ ಮಾತಿನಲ್ಲಿ ಶರಣರಿಗೆ ಎಷ್ಟೇ ಬಡತನವಿದ್ದರೂ ಸಹ ಬಹಿರಂಗವಾಗಿ ಬಡತನವನ್ನು ತೋರ್ಪಡಿಸಿಕೊಳ್ಳದ, ಬಡತನದ ಬದುಕನ್ನು ಔನ್ನತ್ಯಕ್ಕೇರಿಸಿದ ಬಗೆ ಕಂಡುಬರುತ್ತದೆ.

ಶರಣರ ದೃಷ್ಟಿಯಲ್ಲಿ ಶಿವಭಕ್ತಿಯೊಂದೆ ಶಾಶ್ವತವಾದುದು ಬಡತನ ಸಿರಿತನಗಳು ಅಶಾಶ್ವತವಾದವುಗಳೆಂಬ ಚಿಂತನೆ ಕಂಡುಬರುತ್ತದೆ. ಅಂತೆಯೇ ಪಂಚೇಂದ್ರಿಯಗಳು ಇಲ್ಲವಾದರೆ ಜಗದೊಳಗೆ ಯಾರಿಗೂ ಬಡತನವಿಲ್ಲ ಎಂಬ ಚಿಂತನೆ ಲಕ್ಕಮ್ಮನ ವಚನದಲ್ಲಿ ವ್ಯಕ್ತವಾಗಿದೆ.

***"ಐದು ಇಲ್ಲವಾದಿಂಗಲ್ಲದೆ***
***ಜಗದೊಳಗಾರಿಗೂ ಬಡತನವಿಲ್ಲದಿಲ್ಲ.***
***ಐದು ಉಳ್ಳನ್ನಕ್ಕ ಸಕಲ ಜೀವನಕ್ಕೆ ಚೇತನ.***
***ಮಾರಯ್ಯ ಪ್ರಿಯ ಅಮರೇಶ್ವರಲಿಂಗ ಉಳ್ಳನ್ನಕ್ಕ***
***ಧನಮನಸಂಪನ್ನರು."[3]***

[2] ವೀರಣ್ಣ ರಾಜೂರ. (ಸಂ). (2021). *ಆಯ್ದಕ್ಕಿ ಲಕ್ಕಮ್ಮನ ವಚನ, ಶಿವಶರಣೆಯರ ವಚನ ಸಂಪುಟ–5.* (ನಾಲ್ಕನೆಯ ಮುದ್ರಣ). ಕನ್ನಡ ಪುಸ್ತಕ ಪ್ರಾಧಿಕಾರ ವ.ಸಂ–703, ಪುಟ–267

[3] ವೀರಣ್ಣ ರಾಜೂರ. (ಸಂ). (2021). *ಆಯ್ದಕ್ಕಿ ಲಕ್ಕಮ್ಮನ ವಚನ, ಶಿವಶರಣೆಯರ ವಚನ ಸಂಪುಟ–5.* (ನಾಲ್ಕನೆಯ ಮುದ್ರಣ). ಕನ್ನಡ ಪುಸ್ತಕ ಪ್ರಾಧಿಕಾರ ವ.ಸಂ–709, ಪುಟ–269.

"ಪಂಚೇಂದ್ರಿಯಗಳ ಸಂತೃಪ್ತಿಗಾಗಿ ಸಂಪತ್ತನ್ನು ಕ್ರೋಢೀಕರಿಸಬೇಕಾಗುವುದು ಲೋಕ ನಿಯಮ. ಆ ಪಂಚೇಂದ್ರಿಯಗಳನ್ನೇ ಧಿಕ್ಕರಿಸಿ ಭಕ್ತಿಗೆ ಶರಣಾದಾಗ ಸಂಪತ್ತು ನೀಡುವ ಸುಖವನ್ನೇ ಭಕ್ತಿ ನೀಡಿ ಶರಣ ಧನ ಮನ ಸಂಪನ್ನನಾಗುತ್ತಾನೆ ಎಂಬ ನಿಲುವು ಬಡತನವನ್ನು ಅಧ್ಯಾತ್ಮಿಕ ಅರ್ಥದಲ್ಲಿ ನಿವಾರಿಸಿಕೊಳ್ಳುವುದಲ್ಲದೆ, ಬಡತನದ ಆರ್ಥಿಕ ಆಯಾಮದ ಅರ್ಥವನ್ನು ತಿರುಗು ಮುರುಗಾಗಿಸುತ್ತದೆ."[4] ಅಂತೆಯೇ ಪಂಚೇಂದ್ರಿಯಗಳು ಮನುಷ್ಯ ಜೀವನ ಚೈತನ್ಯಕ್ಕೆ ಕಾರಣ ಎಂಬುದು ಪ್ರಮುಖವಾದುದು. ಲಕ್ಕಮ್ಮ ತನ್ನ ಬಡತನದ ಬದುಕನ್ನು ಅಧ್ಯಾತ್ಮಿಕವಾಗಿ ನಿವಾರಿಸಿಕೊಳ್ಳುವ ಬಗೆ ಮಹತ್ವವಾದುದಾಗಿದೆ. ಬಡತನದ ಬಗೆಗೆ ಲಕ್ಕಮ್ಮ ವಿಭಿನ್ನ ನಿಲುವು ತಾಳಿರುವುದನ್ನು ಈ ವಚನದಲ್ಲಿ ಗುರುತಿಸಬಹುದು.

ವಚನಕಾರರ ದೃಷ್ಟಿಯಲ್ಲಿ ಬಡತನ ಸಿರಿತನಗಳಿಗೆ ಅಂತರವಿಲ್ಲ. ಸದ್ಭಕ್ತನಾದವನಿಗೆ ಬಡತನವೇ ಇಲ್ಲವೆಂಬ ಚಿಂತನೆ ಲಕ್ಕಮ್ಮನ ವಚನದಲ್ಲಿ ವ್ಯಕ್ತವಾಗಿದೆ.

***"ಭಕ್ತಂಗೆ ಬಡತನ ಉಂಟೇ? ನಿತ್ಯಂಗೆ ಮರಣ ಉಂಟೇ?***
***ಭಕ್ತರು ಬಡವರೆಂದು ಮತ್ತೊಂದು ಕೊಟ್ಟೆಹೆನೆಂದಡೆ***
***ಮಾರಯ್ಯಪ್ರಿಯ ಅಮರೇಶ್ವರಲಿಂಗವು***
***ಸತ್ತಂದಿಗಲ್ಲದೆ ಬಡತನವಿಲ್ಲ"[5]***

ಶರಣರು ಭಕ್ತಿ ಶ್ರೀಮಂತಿಕೆಯಿಂದ ಕೂಡಿದವರು, ಅವರಿಗೆ ಬಡತನವೆಂಬುದಿಲ್ಲ. ಶರಣರದು ಸತ್ಯ ಮತ್ತು ಸ್ವಾಭಿಮಾನದ ನಿಲುವು. ಹೀಗೆ ಸತ್ಯವಂತರಾದ ಶರಣರಿಗೆ ಮರಣವಿಲ್ಲ ಅವರು ಸದಾಕಾಲ ಸತ್ಯದಿಂದ ಕೀರ್ತಿ ಪಡೆದಿರುತ್ತಾರೆ. ಭಕ್ತಿ ಮತ್ತು ಸತ್ಯದ ಶ್ರೀಮಂತಿಕೆಯಿಂದ ಕೂಡಿದ ಶಿವಶರಣರಿಗೆ ಬಾಹ್ಯ ಜಗತ್ತಿನ ಬಡತನವು ತೊಡಕಾಗದು ಆದ್ದರಿಂದ ಲಕ್ಕಮ್ಮ 'ಭಕ್ತಂಗೆ ಬಡತನ ಉಂಟೇ?' ಎಂದು ಪ್ರಶ್ನಿಸುತ್ತಾಳೆ. "ಭಕ್ತಿಯು ಸ್ಥಿರಗೊಂಡಂತಹ ಭಕ್ತನ ದೃಷ್ಟಿಯಲ್ಲಿ ಲೌಕಿಕ ವಸ್ತುಗಳ ಕೊರತೆ, ಸಮೃದ್ಧಿ, ಯಾವುದಕ್ಕೂ ಅರ್ಥವಿಲ್ಲ. ಆತ ಮನದ ಸಂತೃಪ್ತಿಯಿಂದ ಸದಾ ಸಂತಸದಿಂದ ಜಗದೊಳಗೆ ತನ್ನನ್ನು ತೊಡಗಿಸಿಕೊಳ್ಳುತ್ತಾನೆ. ಲೋಕಜೀವನದ ಯಾವ ಕೊರತೆಯು ಅವನನ್ನು ಬಾಧಿಸದು. ಚಿಂತೆಗೆ ಒಳಗಾಗಿಸದು. ಆದ್ದರಿಂದಲೇ ಲಕ್ಕಮ್ಮನ ದೃಷ್ಟಿಯಲ್ಲೂ ಭಕ್ತನಿಗೆ ಬಡತನವೇ ಇರುವುದಿಲ್ಲ ಎಂಬ ಸಮಚಿತ್ತಸಾಧಿಸಿದೆ."[6] ಲೌಕಿಕ ದೃಷ್ಟಿಯಲ್ಲಿ ಭಕ್ತ ಬಡತನದ ಸ್ಥಿತಿಯಲ್ಲಿ ಕಾಣಬಹುದು ಆದರೆ ಆಂತರಂಗಿಕ ಸ್ಥಿತಿಯಲ್ಲಿ ಆತ ನಿತ್ಯಸಂತೃಪ್ತನಾದವನು. ವಚನಕಾರರು ಎಷ್ಟೇ ಬಡತನದ ಬದುಕನ್ನು ನಡೆಸಿದರೂ ಬಾಹ್ಯವಾಗಿ ತಮ್ಮ ಬಡತನವನ್ನು ತೋರ್ಪಡಿಸಿಕೊಳ್ಳದ ಪರಿ ಕಂಡುಬರುತ್ತದೆ. ವಚನಕಾರರಿಗೆ ತಮ್ಮ ಬಡತನದ ಬವಣೆಗಳು ಸ್ಪಷ್ಟವಾದ ಆರ್ಥಿಕ ನೀತಿಗಳನ್ನು ರೂಪಿಸಿಕೊಳ್ಳುವುದಕ್ಕೆ ಮೂಲ ಕಾರಣವಾದವುಗಳಾಗಿವೆ.

---

[4] ಸವಿತಾ ಬನ್ನಾಡಿ. (2021). *ಆಲಯವು ಬಯಲಾಗಿ.* (ಮೊದಲನೆಯ ಮುದ್ರಣ). ತಿಂಗಳು ಬೆಳಕು ಪ್ರಕಾಶನ. ಪುಟ–176.

[5] ವೀರಣ್ಣ ರಾಜೂರ. (ಸಂ). (2021). *ಆಯ್ದಕ್ಕಿ ಲಕ್ಕಮ್ಮನ ವಚನ, ಶಿವಶರಣೆಯರ ವಚನ ಸಂಪುಟ–5.* (ನಾಲ್ಕನೆಯ ಮುದ್ರಣ). ಕನ್ನಡ ಪುಸ್ತಕ ಪ್ರಾಧಿಕಾರ ವ.ಸಂ–721, ಪುಟ–273,

[6] ರತ್ನಮ್ಮ ಕೆ.ಎಸ್. (2003). ಆಯ್ದಕ್ಕಿ ದಂಪತಿಗಳ ಆರ್ಥಿಕ ಚಿಂತನೆ. (ಪ್ರಥಮ ಮುದ್ರಣ). ಈಶ್ವರಿ ಪ್ರಕಾಶನ. ಪುಟ–139.

2. **ಕಾಯಕದಿಂದ ರೂಪುಗೊಂಡ ಆರ್ಥಿಕ ನೀತಿ**

ಶರಣರು ತಮ್ಮ ಆರ್ಥಿಕ ನೀತಿಯನ್ನು ಕಾಯಕತತ್ವದಿಂದ ರೂಪಿಸಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಆಯ್ದಕ್ಕಿ ಮಾರಯ್ಯ ಮತ್ತು ಆಯ್ದಕ್ಕಿ ಲಕ್ಕಮ್ಮರ ವಚನಗಳಲ್ಲಿ ಸತ್ಯಶುದ್ಧವಾದ ಕಾಯಕದಿಂದ ರೂಪುಗೊಂಡ ಆರ್ಥಿಕ ನೀತಿಯನ್ನು ಗಮನಿಸಬಹುದಾಗಿದೆ. ಈ ಕುರಿತು ಆಯ್ದಕ್ಕಿ ಮಾರಯ್ಯನ ವಚನವನ್ನು ನಿದರ್ಶನಕ್ಕೆ ಗಮನಿಸಬಹುದಾಗಿದೆ.

***"ಕಾಯಕದಲ್ಲಿ ನಿರತನಾದಡೆ,***
***ಗುರುದರ್ಶನವಾದಡೂ ಮರೆಯಬೇಕು,***
***ಲಿಂಗಪೂಜೆಯಾದಡೂ ಮರೆಯಬೇಕು,***
***ಜಂಗಮ ಮುಂದೆ ನಿಂದಿದ್ದಡೂ ಹಂಗು ಹರಿಯಬೇಕು.***
***ಕಾಯಕವೆ ಕೈಲಾಸವಾದ ಕಾರಣ.***
***ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು."***[7]

ಮಾರಯ್ಯ ತಾನು ಮಾಡುವ ಕಾಯಕದಲ್ಲಿ ತಳೆದಿದ್ದ ನಿಷ್ಠೆಯನ್ನು ಗಮನಿಸಬಹುದಾಗಿದೆ. ವಚನಕಾರರು ಪ್ರತಿಯೊಬ್ಬರು ಕಾಯಕದಲ್ಲಿ ನಿರತರಾಗಿ ದುಡಿದೇ ಉಣ್ಣಬೇಕು ಎಂದು ಸಾರಿದವರು, ಕಾಯಕವನ್ನು ನಿರ್ವಹಿಸದೆ ಸೋಮಾರಿಗಳಾಗಿ ಉಣ್ಣುವವರಿಗೆ ಅವಕಾಶವಿಲ್ಲ. ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಯೂ ಒಂದಿಲ್ಲೊಂದು ಕಾಯಕದಲ್ಲಿ ನಿರತನಾಗಿರಬೇಕು. ಹೀಗೆ ಕಾಯಕದಲ್ಲಿ ನಿರತನಾದಂತಹ ವ್ಯಕ್ತಿ ಎಂತಹ ನಿಷ್ಠೆ, ಸಮಚಿತ್ತತೆಯನ್ನು ಹೊಂದಿರಬೇಕೆಂದರೆ ಕಾಯಕದಲ್ಲಿ ನಿರತನಾದರೆ ಗುರು ದರ್ಶನವಾದರೂ ಮರೆಯಬೇಕು, ಲಿಂಗ ಪೂಜೆಯಾದರೂ ಮರೆಯಬೇಕು, ಜಂಗಮ ಸೇವೆಯಾದರೂ ಮರೆಯಬೇಕು, ಕಾಯಕದಲ್ಲಿಯೇ ಕೈಲಾಸವನ್ನು ಕಾಣುವಂತಾಗಬೇಕು ಎಂಬ ಮಹತ್ವದ ಅಂಶವನ್ನು ಮಾರಯ್ಯ ಈ ವಚನದ ಮೂಲಕ ತಿಳಿಸಿಕೊಟ್ಟಿದ್ದಾರೆ. ಕಾಯಕದಲ್ಲಿ ಮಾರಯ್ಯ ಹೊಂದಿದ್ದ ನಿಷ್ಠೆ ಮತ್ತು ತನ್ಮಯತೆಗಳು ಅತ್ಯಂತ ಪ್ರಮುಖವಾದವುಗಳಾಗಿವೆ. ವಚನಕಾರರು ಯಾವ ಕಾಯಕವಾದರೂ ಸರಿ ಯಾವುದಕ್ಕೂ ಅವರು ಹೇಸಿದವರಲ್ಲ ತಾವು ಮಾಡುವ ಕಾಯಕದಲ್ಲಿ ಗೌರವವನ್ನು ಹೊಂದಿದ್ದರು. ಕಾಯಕದ ಮೂಲಕ ತಮ್ಮ ಆರ್ಥಿಕ ನೀತಿಯನ್ನು ರೂಪಿಸಿಕೊಂಡಿದ್ದಾರೆ. ಶರಣರು ಕಾಯಕದಲ್ಲಿಯೇ ದೈವತ್ವವನ್ನು ಕಾಣುವಂತಹ ಪರಿ ಈ ವಚನದಲ್ಲಿ ವ್ಯಕ್ತವಾಗಿದೆ. ಪರಿಶುದ್ಧ, ನಿಷ್ಕಲ್ಮಷ ಮನಸ್ಸಿನಿಂದ ಕಾಯಕವನ್ನು ನಿರ್ವಹಿಸಿ ಕಾಯಕದಲ್ಲಿಯೇ ಕೈಲಾಸವನ್ನು ಕಂಡುಕೊಂಡವರು ಮಾರಯ್ಯನವರು. ಹೀಗೆ ಕಾಯಕದಿಂದ ತಮ್ಮ ಆರ್ಥಿಕ ನೀತಿಯನ್ನು ಮಾರಯ್ಯ ರೂಪಿಸಿಕೊಂಡ ಬಗೆ ಪ್ರಮುಖವಾಗಿ ಅಭಿವ್ಯಕ್ತಗೊಂಡಿದೆ. ಅಂತೆಯೇ ಸತ್ಯಶುದ್ಧ ಕಾಯಕದ ಕುರಿತು ಆಯ್ದಕ್ಕಿ ಲಕ್ಕಮ್ಮನ ವಚನವನ್ನು ನಿದರ್ಶನಕ್ಕೆ ಗಮನಿಸಬಹುದು.

---

[7] ರವೀಂದ್ರನಾಥ, ಕೆ. (ಸಂ.) (2021). *ಸಮಗ್ರ ವಚನ ಸಂಪುಟ – 6.* (ನಾಲ್ಕನೇ ಆವೃತ್ತಿ), ಕನ್ನಡ ಪುಸ್ತಕ ಪ್ರಾಧಿಕಾರ. ವ.ಸಂ–1165, ಪುಟ–436.

***"ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ***
***ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ***
***ಸದ್ಭಕ್ತಂಗೆ ಎತ್ತನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು***
***ಮಾರಯ್ಯಪ್ರಿಯ ಅಮರೇಶ್ವರಲಿಂಗದ ಸೇವೆಯುಳ್ಳನ್ನಕ್ಕರ"[8]***

ಸತ್ಯಶುದ್ಧವಾದ ಕಾಯಕದಿಂದ ರೂಪಿಸಿಕೊಂಡ ಆರ್ಥಿಕ ನೀತಿಯನ್ನು ಈ ವಚನದಲ್ಲಿ ಗಮನಿಸಬಹುದಾಗಿದೆ. ಯಾರಿಗೆ ಮನಶುದ್ಧವಿರುವುದಿಲ್ಲವೋ ಅವರಿಗೆ ದ್ರವ್ಯದ ಬಡತನವು ಕಾಡಬಹುದು, ಆದರೆ ಶುದ್ಧವಾದ ಮನಸ್ಸಿನಿಂದ ಕಾಯಕವನ್ನು ಮಾಡುವಂತಹ ಸದ್ಭಕ್ತನಿಗೆ ಲಕ್ಷ್ಮಿಯು ಎತ್ತನೋಡಿದರತ್ತ ನೆಲೆಸುತ್ತಾಳೆಂದು ಲಕ್ಕಮ್ಮ ಸತ್ಯಶುದ್ಧವಾದ ಕಾಯಕದ ಪ್ರತಿಫಲದ ಕುರಿತು ಈ ವಚನದಲ್ಲಿ ತಿಳಿಸಿಕೊಟ್ಟಿದ್ದಾಳೆ. ಸತ್ಯಶುದ್ಧತೆ, ನಿಷ್ಠೆಯಿಂದ ಕಾಯಕವನ್ನು ನಿರ್ವಹಿಸುವ ಸದ್ಭಕ್ತನಿಗೆ ದ್ರವ್ಯದ (ಆರ್ಥಿಕ) ಬಡತನವು ಕಾಡುವುದಿಲ್ಲ ಆತನಿಗೆ ಹಣದ ಕೊರತೆ ಎದುರಾಗುವುದಿಲ್ಲ ಎಂಬ ಸತ್ಯಶುದ್ಧ ಕಾಯಕದಿಂದ ರೂಪುಗೊಂಡ ಆರ್ಥಿಕ ನೀತಿಯು ಶಿವಶರಣರದಾಗಿದೆ.

**3. ದಾಸೋಹ ಮೂಲದ ಆರ್ಥಿಕ ನೀತಿ**

ಸತ್ಯಶುದ್ಧವಾದ ಕಾಯಕದಿಂದ ಗಳಿಸಿದ್ದನ್ನು ದಾಸೋಹದ ಮೂಲಕ ಸಾಮಾಜಿಕವಾಗಿ ವಿತರಿಸಬೇಕೆಂಬುದು ವಚನಕಾರರೆಲ್ಲರ ಆಶಯವಾಗಿದೆ. ದಾಸೋಹ ತತ್ವ ವಚನಕಾರರು ಈ ಸಮಾಜಕ್ಕೆ ನೀಡಿದ ವಿಶಿಷ್ಟವಾದ ಕಾಣಿಕೆಯಾಗಿದೆ. ಸುಖೀ ರಾಜ್ಯದ ಕನಸನ್ನು ಕಂಡ ವಚನಕಾರರು ದಾಸೋಹದ ಮೂಲಕ ಜನತೆಯ, ಸಮಾಜದ ನೆಮ್ಮದಿಯನ್ನು ಕಾಣಬಯಸಿದರು. ಕಾಯಕ ಮತ್ತು ದಾಸೋಹಗಳು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ನಾವು ಇವುಗಳನ್ನು ಆಧುನಿಕ ಅರ್ಥಶಾಸ್ತ್ರದ ಪರಿಭಾವನೆಗಳಾದ ಉತ್ಪಾದನೆ ಮತ್ತು ವಿತರಣೆಗಳಿಗೆ ಅನ್ವಯಿಸಬಹುದಾಗಿದೆ. ಸತ್ಯಶುದ್ಧ ಕಾಯಕದಿಂದ ಉತ್ಪಾದಿಸಿದ್ದನ್ನು ದಾಸೋಹದ ಮೂಲಕ ವಿತರಿಸಬೇಕೆಂಬ ಆರ್ಥಿಕ ನೀತಿಯು ವಚನಕಾರರದಾಗಿದೆ. ಈ ಕುರಿತು ಆಯ್ದಕ್ಕಿ ಮಾರಯ್ಯನ ವಚನವನ್ನು ನಿದರ್ಶನಕ್ಕೆ ಗಮನಿಸಬಹುದುದಾಗಿದೆ.

***"ಬೇಡಿ ತಂದು ದಾಸೋಹವ ಮಾಡುವನ್ನಬರ,***
***ಪಂಗುಳನ ಪಯಣದಂತೆ, ಯಾಚಕತ್ವ ಭಕ್ತಂಗುಂಟೆ?***
***ಭಕ್ತನಾಗಿ ಹುಟ್ಟಿ ಭಕ್ತರ ಬೇಡಿತಂದು ಮಾಡಿ ಮುಕ್ತಿಯನರಸಲುಂಟೆ?***
***ಅದು ಅಮರೇಶ್ವರಲಿಂಗವ ಮುಟ್ಟದೆ ಇತ್ತಲೆ ಉಳಿಯಿತ್ತು"[9]***

ದಾಸೋಹವನ್ನು ಮಾಡಬೇಕಾದರೆ ಭಕ್ತನಾದವನು ಕಾಯಕವನ್ನು ನಿರ್ವಹಿಸಲೇಬೇಕು. ಹೀಗೆ ಕಾಯಕದಿಂದ ಬಂದ ಹಣದಿಂದ ದಾಸೋಹವನ್ನು ಮಾಡಬೇಕೆ ಹೊರತು ಪರರ ಬಳಿ ಹೋಗಿ

[8] ವೀರಣ್ಣ ರಾಜೂರ. (ಸಂ). (2021). *ಆಯ್ದಕ್ಕಿ ಲಕ್ಕಮ್ಮನ ವಚನ, ಶಿವಶರಣೆಯರ ವಚನ ಸಂಪುಟ–5.* (ನಾಲ್ಕನೆಯ ಮುದ್ರಣ). ಕನ್ನಡ ಪುಸ್ತಕ ಪ್ರಾಧಿಕಾರ ವ.ಸಂ–723, ಪುಟ–273.

[9] ರವೀಂದ್ರನಾಥ, ಕೆ. (ಸಂ.). (2021). *ಸಮಗ್ರ ವಚನ ಸಂಪುಟ – 6.* (ನಾಲ್ಕನೇ ಆವೃತ್ತಿ). ಕನ್ನಡ ಪುಸ್ತಕ ಪ್ರಾಧಿಕಾರ. ವ.ಸಂ–1177, ಪುಟ–439.

ಬೇಡಿತಂದು ದಾಸೋಹವನ್ನು ಮಾಡುವುದು ಕಾಲಿಲ್ಲದ ಹೆಳವನ ಪಯಣದಂತೆ ಎಂದು ಬೇಡಿತಂದು ದಾಸೋಹ ಮಾಡುವುದನ್ನು ಶರಣರು ವಿರೋಧಿಸಿದ್ದಾರೆ. ಭಕ್ತನಾದವನು ಬೇರೆಯವರನ್ನು ಬೇಡಿತಂದು ದಾಸೋಹವನ್ನು ಮಾಡಿದರೆ ಅದು ಅಮರೇಶ್ವರಲಿಂಗಕ್ಕೆ ಸಲ್ಲದೆ ಉಳಿಯಿತ್ತು ಎಂಬುದಾಗಿ ಮಾರಯ್ಯ ತಿಳಿಸಿದ್ದಾರೆ. ಸತ್ಯಶುದ್ಧ ಕಾಯಕದಿಂದ ದಾಸೋಹವನ್ನು ಮಾಡಬೇಕಾದ ಬಗೆಯನ್ನು ಈ ವಚನದ ಮೂಲಕ ತಿಳಿಸಿಕೊಟ್ಟಿದ್ದಾರೆ. ಹೀಗೆ ದಾಸೋಹ ಮೂಲದ ಆರ್ಥಿಕ ನೀತಿ ಶರಣರದಾಗಿದೆ. ಅಂತೆಯೇ ದಾಸೋಹದ ಕುರಿತು ಆಯ್ದಕ್ಕಿ ಲಕ್ಕಮ್ಮನ ವಚನವನ್ನು ನಿದರ್ಶನಕ್ಕೆ ಗಮನಿಸಬಹುದಾಗಿದೆ.

***"ಮಾಡುವ ಮಾಟವುಳ್ಳನ್ನಕ್ಕ***
***ಬೇರೊಂದು ಪದವನರಸಲೇತಕ್ಕೆ?***
***ದಾಸೋಹವೆಂಬ ಸೇವೆಯ ಬಿಟ್ಟುನೀಸಲಾರದೆ***
***ಕೈಲಾಸವೆಂಬ ಆಸೆಬೇಡ***
***ಮಾರಯ್ಯಪ್ರಿಯ ಅಮರೇಶ್ವರಲಿಂಗವಿದ್ದ ಠಾವೇ ಕೈಲಾಸ"***[10]

ಭಕ್ತನಾದವನು ಮಾಡಬೇಕಾದ ಕಾಯಕವಿರುವಾಗ ಬೇರೊಂದು ಬಗೆಯನ್ನು ಅರಸಬಾರದು. ಹೀಗೆ ಭಕ್ತನಾದವನು ದಾಸೋಹವೆಂಬ ಸೇವೆಯಿರುವಾಗ ಅದನ್ನು ಬಿಟ್ಟು, ಅದನ್ನು ನಿರ್ವಹಿಸಲಾಗದೆ ಕೈಲಾಸವನ್ನು ಅರಸುವ ಪರಿಬೇಡ. ಶ್ರಮವಹಿಸಿ ಕಾಯಕವನ್ನು ಮಾಡಬೇಕು ಆಗೆ ಕಾಯಕದಿಂದ ಗಳಿಸಿದ್ದನ್ನು ದಾಸೋಹದ ಮೂಲಕ ವಿತರಿಸಬೇಕು ಅದನ್ನು ಬಿಟ್ಟು ಕಾಯಕವನ್ನು ಮಾಡದೆ, ದಾಸೋಹವನ್ನು ನಿರ್ವಹಿಸಲಾಗದೆ ಕೈಲಾಸಕ್ಕೆ ತೆರಳುತ್ತೇವೆಂಬ ಆಸೆಬೇಡ ಹೀಗೆ ದಾಸೋಹವನ್ನು ಕರ್ತವ್ಯದ ರೀತಿಯಲ್ಲಿ ಮಾಡಬೇಕೆಂಬ ದಾಸೋಹ ಮೂಲದ ಆರ್ಥಿಕ ನೀತಿ ಲಕ್ಕಮ್ಮನ ಈ ವಚನದಲ್ಲಿ ವ್ಯಕ್ತವಾಗಿದೆ ದಾಸೋಹದ ಕುರಿತು ಲಕ್ಕಮ್ಮನ ಇನ್ನೊಂದು ವಚನ ಅತ್ಯಂತ ಪ್ರಮುಖವಾದುದಾಗಿದೆ.

***"ಭಕ್ತರು ಕಾಯಕವೆಂದು ದಾಯಗಾರಿಕೆಯಲ್ಲಿ ತಂದು***
***ದಾಸೋಹವ ಮಾಡಬಹುದೇ?***
***ಒಮ್ಮನದಿ ತಂದು ಒಮ್ಮನದಲ್ಲಿಯೆ ಮಾಡಿ***
***ಇಮ್ಮನವಾಗದ ಮುನ್ನವೆ***
***ಮಾರಯ್ಯಪ್ರಿಯ ಅಮರೇಶ್ವರಲಿಂಗಕ್ಕೆ***
***ಸಲ್ಲಬೇಕು ಮಾರಯ್ಯ"***[11]

ಭಕ್ತರು ಶ್ರಮವಹಿಸಿ ಪ್ರಾಮಾಣಿಕವಾಗಿ ಸತ್ಯಶುದ್ಧ ಕಾಯಕದಿಂದ ದುಡಿದ ಹಣದಿಂದ ದಾಸೋಹವನ್ನು ಮಾಡಬೇಕು ಅದರ ಹೊರತಾಗಿ ಯಾವುದೇ ಕಾಯಕವಿಲ್ಲದೇ ಬಂದ ಹಣ ದಾಸೋಹಕ್ಕೆ ಸಲ್ಲುವುದಿಲ್ಲ

[10] ವೀರಣ್ಣ ರಾಜೂರ. (ಸಂ). (2021). *ಶಿವಶರಣೆಯರ ವಚನ ಸಂಪುಟ,* ಸಮಗ್ರ ವಚನ ಸಂಪುಟ *5.* (ನಾಲ್ಕನೆಯ ಆವೃತ್ತಿ). ಕನ್ನಡ ಪುಸ್ತಕ ಪ್ರಾಧಿಕಾರ. ವ.ಸಂ–725, ಪು.ಸಂ–274.

[11] ವೀರಣ್ಣ ರಾಜೂರ. (ಸಂ). (2021). *ಶಿವಶರಣೆಯರ ವಚನ ಸಂಪುಟ,* ಸಮಗ್ರ ವಚನ ಸಂಪುಟ *5.* (ನಾಲ್ಕನೆಯ ಆವೃತ್ತಿ). ಕನ್ನಡ ಪುಸ್ತಕ ಪ್ರಾಧಿಕಾರ. ವ.ಸಂ–722, ಪು.ಸಂ–273.

ದಾಸೋಹ ಮಾಡುವಾಗ ಮನಸ್ಸು ಪರಿಶುದ್ಧವಾಗಿರಬೇಕೆಂದು ತಿಳಿಸುತ್ತಾರೆ, ಲಕ್ಕಮ್ಮ ಅದನ್ನು ಒಮ್ಮನವೆಂದು ಕರೆಯುತ್ತಾರೆ. ಅದನ್ನು ಬಿಟ್ಟು ಭಿನ್ನ ಭಾವಗಳಿಂದ ದಾಸೋಹವನ್ನು ಮಾಡಲಾಗದು ಎಂದು ಈ ವಚನದ ಮೂಲಕ ಲಕ್ಕಮ್ಮ ದಾಸೋಹದ ಬಗೆಗೆ ತಿಳಿಸಿಕೊಟ್ಟಿದ್ದಾಳೆ. ಅಂತೆಯೇ ತನ್ನ ಪತಿ ಮಾರಯ್ಯನಿಗೆ ಕಾಯಕದ ಬಗೆಗಿನ ಎಚ್ಚರವು ವಚನದ ಕೊನೆಯ ಸಾಲಿನಲ್ಲಿ ಬಂದಿದೆ. ಶರಣರಿಗೆ ದಾಸೋಹವನ್ನು ಮಾಡಲು ಅಕ್ಕಿಯನ್ನು ಆಯ್ದು ತರಬೇಕೆಂಬ ಚಿಂತನೆಯೂ ಸಹ ಈ ವಚನದಲ್ಲಿ ಬಂದಿದೆ. ಹೀಗೆ ಲಕ್ಕಮ್ಮ ಮತ್ತು ಮಾರಯ್ಯರು ದಾಸೋಹ ಮೂಲದ ಆರ್ಥಿಕ ನೀತಿಯನ್ನು ರೂಪಿಸಿಕೊಂಡ ಬಗೆ ಪ್ರಮುಖವಾಗಿ ಕಂಡುಬರುತ್ತದೆ.

### 4. ಅಗತ್ಯಕ್ಕೆ ಬೇಕಾದಷ್ಟನ್ನು ಮಾತ್ರ ಸಂಪಾದಿಸುವ ಆರ್ಥಿಕ ನೀತಿ

ಅಂದಿನ ಅಗತ್ಯಕ್ಕೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಸಂಪಾದಿಸಬೇಕೆಂಬ ಆರ್ಥಿಕ ನೀತಿಯು ವಚನಕಾರರದು. ಸಂಪತ್ತಿನ ಸಂಗ್ರಹ ತತ್ವವನ್ನು ವಿರೋಧಿಸಿ ಅಸಂಗ್ರಹ ತತ್ವಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿದ್ದಾರೆ. ಅಸಂಗ್ರಹ ತತ್ವದ ಪರಿಪಾಲನೆಯಲ್ಲಿ ಆಯ್ದಕ್ಕಿ ಲಕ್ಕಮ್ಮ ಮತ್ತು ಆಯ್ದಕ್ಕಿ ಮಾರಯ್ಯ ಹೆಚ್ಚು ಪ್ರಸ್ತುತರಾಗುತ್ತಾರೆ. ಮಾರಯ್ಯ ಮತ್ತು ಲಕ್ಕಮ್ಮ ದಂಪತಿಗಳು ಬಸವಣ್ಣನ ಮಹಾಮನೆಯ ಮತ್ತು ಶರಣರ ಮನೆಯಂಗಳದಲ್ಲಿ ಬಿದ್ದ ಅಕ್ಕಿಯನ್ನು ಆಯ್ದು ತಂದು ದಾಸೋಹವನ್ನು ನಡೆಸುತ್ತಿದ್ದ ಶರಣ ದಂಪತಿಗಳು, ಒಂದು ದಿನ ಮಾರಯ್ಯ ಬಸವಣ್ಣನವರ ಮಹಾಮನೆಯ ಅಂಗಳದಲ್ಲಿ ಬಿದ್ದಿದ್ದ ಅಕ್ಕಿಯನ್ನು ಅಂದಿನ ಅಗತ್ಯಕ್ಕಿಂತ ಹೆಚ್ಚಿಗೆ ಆಯ್ದುತರುತ್ತಾನೆ. ಆಗ ಲಕ್ಕಮ್ಮ ಮಾರಯ್ಯನಿಗೆ ಹೇಳುವ ಮಾತು ಈ ವಚನದಲ್ಲಿ ಪ್ರಮುಖವಾಗಿ ಮೂಡಿಬಂದಿದೆ.

***"ಒಮ್ಮನವ ಮೀರಿ ಇಮ್ಮನದಲ್ಲಿ ತಂದಿರಿ,***
***ಇದು ನಿಮ್ಮ ಮನವೊ,***
***ಬಸವಣ್ಣನ ಅನುಮಾನದ ಚಿತ್ತವೊ?***
***ಈ ಮಾತು ಮಾರಯ್ಯ ಪ್ರಿಯ***
***ಅಮರೇಶ್ವರಲಿಂಗಕ್ಕೆ ಸಲ್ಲದಬೋನ***
***ಅಲ್ಲಿಯೇ ಸುರಿದು ಬನ್ನಿ, ಮಾರಯ್ಯ"***[12]

ಲಕ್ಕಮ್ಮ ಅಂದಿನ ಅಗತ್ಯಕ್ಕಿಂತ ಹೆಚ್ಚಿಗೆ ಅಕ್ಕಿಯನ್ನು ತಂದ ಪತಿ ಮಾರಯ್ಯನಿಗೆ ಎಚ್ಚರಿಸಿದ ಬಗೆ ಈ ವಚನದಲ್ಲಿ ವ್ಯಕ್ತವಾಗಿದೆ. ವಚನಕಾರರು ಸತ್ಯಶುದ್ಧ ಕಾಯಕದಿಂದ ಬಂದದ್ದನ್ನು ಮಾತ್ರ ದಾಸೋಹಕ್ಕೆ ಬಳಸುತ್ತಿದ್ದರು. ಹೆಚ್ಚಿಗೆ ಬಂದುದನ್ನು ಅವರು ಮುಟ್ಟುತ್ತಿರಲಿಲ್ಲ, ಕಾಯಕದಲ್ಲಿ ನಿಷ್ಠೆಯನ್ನು ಹೊಂದಿದವರಾಗಿದ್ದಾರೆ. ಅತಿಯಾದ ಆಸೆಯಿಂದ ಅಕ್ಕಿಯನ್ನು ಆಯ್ದು ತಂದದ್ದನ್ನು ಮಾರಯ್ಯನಿಗೆ ಪ್ರಶ್ನಿಸುತ್ತಾಳೆ. ಅಗತ್ಯಕ್ಕಿಂತ ಹೆಚ್ಚಿನ ಅರ್ಥ, ಸಂಪತ್ತುಗಳು 'ಮಾರಯ್ಯ ಪ್ರಿಯ ಅಮರೇಶ್ವರಲಿಂಗಕ್ಕೆ ಸಲ್ಲುವುದಿಲ್ಲ' ಎಂದು ಹೇಳಿ ಹೆಚ್ಚಿಗೆ ಆಯ್ದು ತಂದ ಅಕ್ಕಿಯನ್ನು ಅಲ್ಲಿಯೇ ಸುರಿದು ಬರುವಂತೆ

---

[12] ವೀರಣ್ಣ ರಾಜೂರ. (ಸಂ). (2021). *ಶಿವಶರಣೆಯರ ವಚನ ಸಂಪುಟ*, ಸಮಗ್ರ ವಚನ ಸಂಪುಟ *5*. (ನಾಲ್ಕನೆಯ ಆವೃತ್ತಿ). ಕನ್ನಡ ಪುಸ್ತಕ ಪ್ರಾಧಿಕಾರ. ವ.ಸಂ–710, ಪು.ಸಂ–269.

ತಿಳಿಸುತ್ತಾಳೆ. ಹೀಗೆ ಲಕ್ಕಮ್ಮನ ಈ ವಚನದಲ್ಲಿ ಅಗತ್ಯಕ್ಕೆ ಬೇಕಾದಷ್ಟನ್ನು ಮಾತ್ರ ಸಂಪಾದಿಸುವ ಆರ್ಥಿಕ ನೀತಿಯನ್ನು ಗಮನಿಸಬಹುದಾಗಿದೆ. ಈ ಕುರಿತು ಲಕ್ಕಮ್ಮನ ಮತ್ತೊಂದು ವಚನ ಗಮನಾರ್ಹವಾದುದಾಗಿದೆ.

***"ಆಸೆಯೆಂಬುದು ಅರಸಿಂಗಲ್ಲದೆ,***
***ಶಿವಭಕ್ತರಿಗುಂಟೆ ಅಯ್ಯಾ?***
***ರೋಷವೆಂಬುದು ಯಮದೂತರಿಗಲ್ಲದೆ,***
***ಅಜಾತರಿಗುಂಟೆ ಅಯ್ಯಾ?***
***ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ.***
***ಮಾರಯ್ಯಪ್ರಿಯ ಅಮರೇಶ್ವರ ಲಿಂಗಕ್ಕೆ***
***ದೂರ ಮಾರಯ್ಯ"***[13]

ವಚನಕಾರರು ಆಸೆಯನ್ನು, ಅತಿ ಆಸೆಯನ್ನು ತಿರಸ್ಕರಿಸಿ ಆಸೆಯನ್ನು ಮಾಯೆಗೆ ಹೋಲಿಸಿದ್ದಾರೆ. ಆಸೆಯೆಂಬುದು ಅರಸನಿಗೆ ಮಾತ್ರ ಇರುವಂತದಹದ್ದೇ ಹೊರತಾಗಿ ಶಿವಭಕ್ತರಿಗೆ ಸಲ್ಲದೆಂಬ ಪರಿ ಈ ವಚನದಲ್ಲಿ ವ್ಯಕ್ತವಾಗಿದೆ. ಶಿವಭಕ್ತರಾದವರಿಗೆ ಆಸೆ, ರೋಷಗಳು ಸಲ್ಲವು ಆಸೆ, ರೋಷಗಳನ್ನು ತ್ಯಜಿಸಿದಾತನೆ ನಿಜವಾದ ಶಿವಭಕ್ತನಾಗಲು ಸಾಧ್ಯವೆಂಬ ನಿಲುವು ಪ್ರಮುಖವಾದುದು. ಅಂತೆಯೇ ದಾಸೋಹವನ್ನು ಮಾಡಲು ಅಗತ್ಯಕ್ಕಿಂತ ಹೆಚ್ಚಿನ ಅಕ್ಕಿಯನ್ನು ಆಯ್ದು ತಂದ ಪತಿ ಮಾರಯ್ಯನನ್ನು ಲಕ್ಕಮ್ಮ ಎಚ್ಚರಿಸುವ ಪರಿ ಈ ವಚನದಲ್ಲಿ ವ್ಯಕ್ತವಾಗಿದೆ. ಶಿವಭಕ್ತರಾದವರು ಅತಿ ಆಸೆಯನ್ನು ನಿರಾಕರಿಸಬೇಕು. ಈಸಕ್ಕಿಯಾಸೆ ನಿಮಗೇಕೆ? ಎಂದು ಪ್ರಶ್ನಿಸಿದ ಲಕ್ಕಮ್ಮ ಅಗತ್ಯಕ್ಕಿಂತ ಹೆಚ್ಚಿಗೆ ಸಂಪಾದಿಸುವುದನ್ನು ಈಶ್ವರನು ಒಪ್ಪುವುದಿಲ್ಲ ಇದು ಮಾರಯ್ಯ ಪ್ರಿಯ ಅಮರೇಶ್ವರಲಿಂಗಕ್ಕೆ ದೂರವಾದದ್ದು ಎಂದು ತಿಳಿಸಿ ಪತಿ ಮಾರಯ್ಯನಿಗೆ ಅಗತ್ಯಕ್ಕೆ ಬೇಕಾದಷ್ಟನ್ನು ಮಾತ್ರ ಸಂಪಾದಿಸುವ ಆರ್ಥಿಕ ನೀತಿಯನ್ನು ಈ ವಚನದ ಮೂಲಕ ತಿಳಿಸಿಕೊಟ್ಟಿದ್ದಾಳೆ.

ವಚನಸಾಹಿತ್ಯದಲ್ಲಿ ಆಯ್ದಕ್ಕಿ ಲಕ್ಕಮ್ಮ ಮತ್ತು ಮಾರಯ್ಯ ದಂಪತಿಗಳು ಪ್ರಮುಖರಾದವರು. ಇವರ ಆರ್ಥಿಕ ಚಿಂತನೆಗಳು ಅತ್ಯಂತ ಪ್ರಮುಖವಾದವುಗಳು. ಬಡತನದ ಮೂಲದಿಂದ ಬಂದ ಈ ವಚನಕಾರರು ತಮ್ಮ ಆರ್ಥಿಕಚಿಂತನೆಗೆ ಸತ್ಯಶುದ್ಧಕಾಯಕ, ಮೌಲ್ಯ ಮತ್ತು ನಿಷ್ಠೆಗಳನ್ನು ಅಳವಡಿಸಿಕೊಂಡ ಬಗೆ ಅತ್ಯಂತ ಮಹತ್ವವಾದುದಾಗಿದೆ. ಸತ್ಯಶುದ್ಧ ಕಾಯಕದಿಂದ, ದಾಸೋಹ ಚಿಂತನೆಯಿಂದ ಅಗತ್ಯಕ್ಕೆ ಬೇಕಾದಷ್ಟನ್ನು ಮಾತ್ರ ಸಂಪಾದಿಸಬೇಕೆಂಬ ಆರ್ಥಿಕ ನೀತಿಗಳನ್ನು ಸಮಾಜಕ್ಕೆ ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಲಕ್ಕಮ್ಮ ಹೇಳುವ **'ಈಸಕ್ಕಿಯಾಸೆ ನಿಮಗೇಕೆ'** ಎಂಬ ಮಾತು ಮಾರಯ್ಯನಿಗೆ ಮಾತ್ರ ಅನ್ವಯಿಸದೆ. ಸಮಾಜದ ಪ್ರತಿಯೊಬ್ಬರಿಗೂ ಅನ್ವಯಿಸುತ್ತದೆ. ಅತಿ ಆಸೆಯನ್ನು ನಿರಾಕರಿಸಿ, ಸಂಪತ್ತಿನ ಅಸಂಗ್ರಹ ತತ್ತ್ವವನ್ನು ಹೇಳಿದ ಆಯ್ದಕ್ಕಿ ಲಕ್ಕಮ್ಮ ಮತ್ತು ಆಯ್ದಕ್ಕಿ ಮಾರಯ್ಯರು ಇಂದಿಗೂ ಪ್ರಸ್ತುತರಾಗುತ್ತಾರೆ. ಪ್ರಸ್ತುತ ಇಪ್ಪತ್ತೊಂದನೆಯ

[13] ವೀರಣ್ಣ ರಾಜೂರ. (ಸಂ). (2021). *ಶಿವಶರಣೆಯರ ವಚನ ಸಂಪುಟ,* ಸಮಗ್ರ ವಚನ ಸಂಪುಟ *5.* (ನಾಲ್ಕನೆಯ ಆವೃತ್ತಿ). ಕನ್ನಡ ಪುಸ್ತಕ ಪ್ರಾಧಿಕಾರ. ವ.ಸಂ–708, ಪು.ಸಂ–268.

ಶತಮಾನದಲ್ಲಿಯೂ ಸಹ ಆಯ್ದಕ್ಕಿ ಲಕ್ಕಮ್ಮ ಮತ್ತು ಮಾರಯ್ಯ ದಂಪತಿಗಳ ಆರ್ಥಿಕ ನೀತಿಗಳನ್ನು ಕುರಿತು ಚರ್ಚಿಸಬೇಕಾದುದು ಅತ್ಯಂತ ಮಹತ್ವವಾದುದಾಗಿದೆ.

**ಆಕರ ಗ್ರಂಥಗಳು**


- ರತ್ನಮ್ಮ, ಕೆ.ಎಸ್. (2003). ಆಯ್ದಕ್ಕಿ ದಂಪತಿಗಳ ಆರ್ಥಿಕ ಚಿಂತನೆ. (ಪ್ರಥಮ ಮುದ್ರಣ). ಈಶ್ವರಿ ಪ್ರಕಾಶನ.
- ರವೀಂದ್ರನಾಥ, ಕೆ. (ಸಂ.). (2021). *ಸಮಗ್ರ ವಚನ ಸಂಪುಟ – 6.* (ನಾಲ್ಕನೇ ಆವೃತ್ತಿ). ಕನ್ನಡ ಪುಸ್ತಕ ಪ್ರಾಧಿಕಾರ.
- ವೀರಣ್ಣ ರಾಜೂರ. (ಸಂ). (2021). *ಆಯ್ದಕ್ಕಿ ಲಕ್ಕಮ್ಮನ ವಚನ, ಶಿವಶರಣೆಯರ ವಚನ ಸಂಪುಟ–5.* (ನಾಲ್ಕನೆಯ ಮುದ್ರಣ). ಕನ್ನಡ ಪುಸ್ತಕ ಪ್ರಾಧಿಕಾರ.
- ವೀರಣ್ಣ ರಾಜೂರ. (ಸಂ). (2021). *ಶಿವಶರಣೆಯರ ವಚನ ಸಂಪುಟ,* ಸಮಗ್ರ ವಚನ ಸಂಪುಟ–*5.* (ನಾಲ್ಕನೆಯ ಆವೃತ್ತಿ). ಕನ್ನಡ ಪುಸ್ತಕ ಪ್ರಾಧಿಕಾರ.